## ಪ್ರವಾಸೋದ್ಯಮ ನಿಗಮದ ಬಸ್ಸುಗಳು

644. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ನಿಗಮದಲ್ಲಿರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು;

ಆ) ಈ ಬಸ್ಸುಗಳು ರಾಜ್ಯದ ಯಾವ ಯಾವ ಭಾಗಗಳಲ್ಲಿ ಸಂಚರಿಸುತ್ತವೆ;

ಇ) ಎಷ್ಟು ಬಸ್ಸುಗಳು ದುರಸ್ತಿಯಲ್ಲಿವೆ;

ಈ) ದುರಸ್ತಿಗೊಳಗಾಗಿರುವ ಬಸ್ಸುಗಳು ಮತ್ತು ಹಳೆಯ ಬಸ್ಸುಗಳನ್ನು ವಿಲೇವಾರಿ ಮಾಡಲು ಸರ್ಕಾರ ಕಳೆದ ಎರಡು ವರ್ಷಗಳಿಂದ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):–

ಅ) 22

ಆ) ಬೆಂಗಳೂರಿನಿಂದ ಪ್ರತಿನಿತ್ಯದ ಪ್ರವಾಸ:

ಬೆಂಗಳೂರು, ಮೈಸೂರು, ಉದಕ ಮಂಡಲ, ಬೇಲೂರು–ಹಳೇಬೀಡು ಮತ್ತು ಶ್ರವಣಬೆಳಗೊಳ, ತಿರುಪತಿ.

ಪ್ರತಿ ಶುಕ್ರವಾರ:

ಮಂತ್ರಾಲಯ–ಹಂಪೆ–ಟಿಬಿ ಡ್ಯಾಮ್.

ಪ್ರತಿ ಗುರುವಾರ:

ಸೌತ್ ಕೆನರಾ, ಗೋವಾ–ಗೋಕರ್ಣ, ಉತ್ತರ ಕರ್ನಾಟಕ

ನೈಟ್ ಸರ್ವಿಸ್‌ಗಳು:

ಮಂಗಳೂರು, ಹುಬ್ಬಳ್ಳಿ.

ಮೈಸೂರುನಿಂದ ಪ್ರತಿನಿತ್ಯದ ಪ್ರವಾಸ:

ಮೈಸೂರು, ಉದಕಮಂಡಲ, ಬೇಲೂರು–ಹಳೆಬೀಡು ಮತ್ತು ಶ್ರವಣಬೆಳಗೊಳ.

ಹೊಸಪೇಟೆಯಿಂದ:

ಟಿ.ಬಿ. ಡ್ಯಾಮ್ ಮತ್ತು ಹಂಪೆ.

ಇ) ಇಲ್ಲ.

ಈ) ಹೊಸ ಬಸ್ಸುಗಳು ಬಂದ ಮೇಲೆ ಹಳೆಯ ಬಸ್ಸುಗಳನ್ನು 1989–90ರಲ್ಲಿ ಟೆಂಡರ್ ಹಾಗೂ ಹರಾಜಿನ ಮೂಲಕ ಜುಲೈನಲ್ಲಿ ಮಾರಾಟ ಮಾಡಲಾಗಿದೆ.

## ಐ.ಸಿ.ಡಿ.ಎಸ್. ಯೋಜನೆ ಬಗ್ಗೆ

640. ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?